ಅನುಭವಿಸಿದ. ನಕ್ಕದ್ದು ಯಾಕೆ ಎಂದು ಕೇಳುವ ಧೈರ್ಯವೂ ಆಗಲಿಲ್ಲ. ಯಾಕೆಂದರೆ ಪ್ರಣತಿಯ ತಾತ್ವಿಕತೆ ನಿಜವಾಗಿ ಗಟ್ಟಿತನದ್ದು ಮತ್ತು ತನ್ನದು ಪೊಳ್ಳಾದದ್ದು ಎಂದು ಹಲವು ಸಲ ಸಾಬೀತಾಗಿತ್ತು. ಹಾಗಾಗಿ ಅವಳು ನಕ್ಕಾಗ ಸುಮ್ಮನೇ ನೋಡುತ್ತಾ ನಿಂತ. ಆದರೆ, ಹೀಗೆ ಸುಮ್ಮನೆ ನಿಂತರೆ ಏನೂ ಇತ್ಯರ್ಥವಾಗದೇ ಹೋಗಬಹುದು; ಇದು ನಮ್ಮ ಭವಿಷ್ಯತ್ತಿನ ಪ್ರಶ್ನೆ. ಒಂದೈದು ಸಾವಿರ ಹೆಚ್ಚಿಗೆ ಬಂದರೆ ಏನಕ್ಕಾದರೂ ಬೇಕಾಗಬಹುದು. ಇದನ್ನು ನೇರ ಹೇಳಿದರೆ ಪ್ರಣತಿ ಎದುರು ತಾನು ತೀರಾ ಸಣ್ಣವನಾಗ್ತೇನೆ... ಸುಮ್ಮನಿದ್ದರೆ ಅವಳು ತನ್ನ ಗಟ್ಟಿ ತಾತ್ವಿಕತೆ ಮುಂದಿಟ್ಟು ಪಿಎಚ್.ಡಿ ಮಾಡುವುದರಿಂದ ನುಣುಚಿಕೊಳ್ಳುತ್ತಾಳೆ. ಆಮೇಲೆ ಇಪ್ಪತ್ತೆರಡು ದಿನಕ್ಕೂ ಸಾಲದೆ ಹೋಗುತ್ತಿರುವ ಸಂಬಳ ಈ ಬೆಲೆ ಏರಿಕೆಯ ದಿನಮಾನದಲ್ಲಿ ಹತ್ತು ದಿನಕ್ಕೇ ಖಾಲಿಯಾಗುತ್ತದೆ; ಹಾಗಾಗಿ ಮಾತಾಡುವುದೇ ವಾಸಿ ಅನಿಸಿ ಡಿಆರ್‌ಎನ್‌ರನ್ನ ನೆನಪಿಸಿಕೊಂಡ. ಅವರು ನೆನಪಾದರೂ ಆ ಯಾವ ಮಾತುಗಳನ್ನೂ ಪ್ರಣತಿ ಎದುರು ಆಡಲಿಕ್ಕೆ ಸಾಧ್ಯ ಆಗದೆ ಕೇವಲ, 'ನೋಡು ಯೋಚಿಸು' ಅಂತಂದ.

ಪ್ರಣತಿ ಮತ್ತೆ ನಕ್ಕಳು. ಖಾಲಿಕೊಡವನ್ನು ಮತ್ತೆ ಯಾರೋ ಬರಿದು ಮಾಡಿ ಒಳಗೆ ಸಾರಿಸುತ್ತಿರುವ ಅನುಭವವಾಯಿತು. 'ಯೋಚಿಸ್ತಲೇ ಇದ್ದೀನಿ. ಈ ಪಿಎಚ್.ಡಿ ತೆಗೆದುಕೊಂಡು ಏನ್ಮಾಡ್ತೀಯಾ? ಐದು ಸಾವಿರ ತಗೊಂಡು ಅದನ್ನ ಖರ್ಚು ಮಾಡ್ಕೊಬಹುದು ಅಷ್ಟೇ. ಅದು ಬಿಟ್ಟರೆ ಡಾಕ್ಟರ್ ಅನಿಸ್ಕೊಬಹುದು. ಯಾರೂ ಅನ್ನದಿದ್ದರೆ ಕಡೇಪಕ್ಷ ಸೈನ್ ಮಾಡೋವಾಗಲಾದರೂ ನಾವೇ ಡಾ ಅಂತ ಬರೆದು ಒಂದು ಚುಕ್ಕಿ ಇಟ್ಟು ಸೈನ್ ಮಾಡಬಹುದು. ನೋಡ್ತಿದ್ದೀನಲ್ಲ... ಹೇಸಿಗೆ ಆಗ್ತಿದೆ ನನಗೆ' ಎನ್ನುವಾಗ ಅವಳ ಕಣ್ಣಮುಂದೆ ಹಲವು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಸುಳಿದವು. ಒಂದಿಬ್ಬರ ಕನ್ನಡ ಬಿಟ್ಟರೆ ಉಳಿದವರು ಏನು ಬರೆದಿದ್ದಾರೆ ಎನ್ನುವುದನ್ನೇ ಓದಲಿಕ್ಕೆ ಆಗಿರಲಿಲ್ಲ ಪ್ರಣತಿಗೆ. ಆರಂಭದ ಕೆಲವು ದಿನಗಳಲ್ಲಿ ಅವಳಿಗೆ ತಲೆ ಸುತ್ತಲು ಆರಂಭಿಸಿತ್ತು. ತನ್ನ ಗಟ್ಟಿ ಸಾಹಿತ್ಯಕ ತಾತ್ವಿಕತೆಯನ್ನು ಮಕ್ಕಳ ಹರಕು ಮುರುಕು ಕನ್ನಡ ಇನ್ನಿಲ್ಲದಂತೆ ಹೆದರಿಸಿತ್ತು. ಇವುಗಳಿಗೆ ಕಲಿಸೋದಕ್ಕೆ ಪಿಎಚ್.ಡಿ ಬೇಕಾಗಿಲ್ಲ. ಆದ್ರೂ ನಾನು ಪಿಎಚ್.ಡಿ ಮಾಡೋದಾದ್ರೆ 'ಇವರಿಗೆ ಕನ್ನಡ ಕಲಿಸಿ ಇಲ್ಲೀವರೆಗೆ ದೂಡಿರೋರು ಯಾರು ಅಂತ ಸಂಶೋಧನೆ ಮಾಡ್ತೀನಿ' ಅಂದಿದ್ದಳು ಪ್ರಣತಿ.

ಖಾಲಿಕೊಡಕ್ಕೂ ಈ ಎಲ್ಲ ಸಂಗತಿಗಳು ಗೊತ್ತಿದ್ದರೂ ಆ ಯಾವುದೂ ಮುಖ್ಯವಾಗದೆ ಇಪ್ಪತ್ತೆರಡು ಸಾವಿರ ಮೂವತ್ತು ದಿನಗಳಿಗಾದರೂ ಒದಗಿಬರುವುದಾದರೆ ಹೇಗಿರುತ್ತದೆ ಎನ್ನುವುದಷ್ಟೇ ಮುಖ್ಯವಾಗಿತ್ತು. ಆದರೂ ಪ್ರಣತಿಯನ್ನು ಕೆಣಕಿ ಎದುರು ಹಾಕಿಕೊಳ್ಳುವುದು ಕಷ್ಟದ ಕೆಲಸ ಅನಿಸಿ ತೀರಾ ಮೆದು ದನಿ ಮತ್ತು ಅಸಹಾಯಕ ನಾಟಕೀಯ ಟೋನ್‌ನಲ್ಲಿ ಪ್ರಣತಿಯ ಬಲಗೈ ಹಿಡಿದು ಎತ್ತಿ ಅವಳ ಕಣ್ಣಲ್ಲಿ ಕಣ್ಣಿಟ್ಟು ದುರಂತ ನಾಟಕದ ನಾಯಕನಂತೆ 'ನೀನು ಹೇಳಿದ್ದು ಎಲ್ಲ ಸರಿ. ಆದರೆ ಐದು ಸಾವಿರ ಮ್ಯಾಟರ್ಸ್ ಮೋರ್...' ಎಂದು ಕಣ್ಣಲ್ಲಿ ನೀರಿನ ಸಣ್ಣ ಸೆಲೆ ತುಳುಕಿಸಿದ್ದ. 'ಮ್ಯಾಟರ್ಸ್ ಮೋರ್' ಎನ್ನುವುದನ್ನು ಪ್ರಣತಿ ಯಾವ ನೆಲೆಯಲ್ಲಿ ಅರ್ಥ ಮಾಡಿಕೊಂಡಳೋ... ತಲೆಗೆ ಸ್ಪ್ರಿಂಗ್ ಸಿಕ್ಕಿಸಿಕೊಂಡು ಅಲುಗುವ ಬೊಂಬೆಯ ಹಾಗೆ ಪ್ರಣತಿ ಕೂಡ ತಲೆ ಅಲುಗಿಸಿ ಸಮ್ಮತಿ ಸೂಚಿಸಿದಳು. ಆ ಹೊತ್ತು ಅವಳಿಗೆ ತನ್ನ ಅಮ್ಮ ಉದಾಹರಿಸಿದ ತನ್ನ ಗೆಳತಿಯ ಎಂ.ಟೆಕ್ ಗಂಡನಿಗೆ ಸೆಡ್ಡು ಹೊಡೀಬೇಕು ಅನಿಸಿ ರಾಜಿ ಮಾಡಿಕೊಂಡಿದ್ದಳು.

## 4

'ಅದು ಯೂನಿವರ್ಸಿಟಿಯ ಬ್ರಾಂಚ್. ಸೆಂಟರ್ ಮಾಡಿಕೊಳ್ಳಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಅಲ್ಲಿ ಡಾ. ರಮಾ ಅಂತ ಇರ್ತಾರೆ. ಅವರೇ ಇದಕ್ಕೆ ಇನ್‌ಚಾರ್ಜ್. ನಿಮ್ಮಿಬ್ಬರನ್ನ ಕಳಿಸ್ತೀನಿ ಅಂತ ಮಾತಾಡಿದ್ದೀನಿ. ಹೋಗಿ ಭೇಟಿಯಾಗಿ' ಅಂದರು ವರದರಾಜಪ್ಪ.

ಪ್ರಣತಿ ಅಂದೇ ಮೊದಲ ಬಾರಿಗೆ ವರದರಾಜಪ್ಪನವರನ್ನು ಕಂಡದ್ದು. ಖಾಲಿಕೊಡ ತುಂಬ ಉತ್ಸಾಹದಲ್ಲಿ ಇದ್ದ. 'ಸರ್ ಫೀಸು ಎಷ್ಟು?' ಅಂದದ್ದಕ್ಕೆ 'ವರ್ಷಕ್ಕೆ ಎಪ್ಪತ್ತು ಸಾವಿರ... ಈ ಚಾನ್ಸ್ ಬಿಟ್ಟರೆ ಬೇರೆ ಸಿಗಲ್ಲ... ಹೋಗ್ಬನ್ನಿ ಗುಡ್ ಲಕ್' ಎಂದು ವರದರಾಜಪ್ಪ ಶುಭಹಾರೈಸಿದ್ದರು.

ಖುಷಿಯಿಂದ ಇದ್ದ ಖಾಲಿಕೊಡದ ಮುಖದಲ್ಲಿ ನೆರಿಗೆಗಳು ಮೂಡಿದ್ದನ್ನು ಪ್ರಣತಿ ಗಮನಿಸಿದಳು. ಅವಳಿಗೆ ಸಮಸ್ಯೆ ಅರ್ಥವಾಯಿತು. ಧುತ್ತನೆ ಎಪ್ಪತ್ತು ಸಾವಿರ ಹೊಂದಿಸೋದು ಹೇಗೆ? ಅವಳೂ